

# ಪಾಪದ ಮಳೆ

■ ಗೌರಿ

**ಮನುಕುಲ ನಡೆಸಿದ ಅನಾಚಾರಗಳ ಫಲವನ್ನು ನಾವೀಗ ಕೊರೊನಾ ರೂಪದಲ್ಲಿ ಕಾಣುತ್ತಿದ್ದೇವೆ. ಅಂಥದ್ದೇ ಒಂದು ವಿಪರೀತ ವಿಪತ್ತಿನ ಚಿತ್ರಣವನ್ನು ಈ ಕಿರುಚಿತ್ರ ಕಟ್ಟಿಕೊಡತ್ತದೆ.**

'ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದಡೆ ನಿಲಲುಬಾರದು' ಬಸವಣ್ಣನವರ ವಚನದ ಈ ಸಾಲು ಈ ಕಾಲಕ್ಕೆ ಹೊಮ್ಮಿಸುವ ಅರ್ಥಗಳು ಹಲವು. 'ಆ್ಯಸಿಡ್' ಕಿರುಚಿತ್ರ ಈ ಸಾಲನ್ನು ಅಕ್ಷರಶಃ ಸಾಕ್ಷಾತ್ಕರಿಸಿದ ಹಾಗೆ ತೋರಿಸುತ್ತದೆ.

ಒಂದು ರುದ್ರಭೀಬತ್ಸ ದೃಶ್ಯದೊಂದಿಗೇ ಈ ಕಿರುಚಿತ್ರ ಶುರುವಾಗುತ್ತದೆ. ರಸ್ತೆ ಬದಿಯಲ್ಲಿ ಒಂದು ಮುದ್ದಾದ ಬಟಣ್ ಗೊಂಬೆ ಬಿದ್ದಿದೆ. ಒಮ್ಮಿಂದೊಮ್ಮೆಲೇ ಕಿರುಚಾಟ ಕೇಳಿಸುತ್ತದೆ. ರಸ್ತೆ ಮೇಲೆಯೇ ಒಂದಕ್ಕೊಂದು ಡಿಕ್ಕಿ ಹೊಡೆದು ಕಾರು ನಿಲ್ಲುತ್ತದೆ. ವಾಹನಗಳಿಂದ ಇಳಿದು ಓಡುತ್ತಿರುವ ಜನರ ಕಾಲುಗಳು ಆ ಗೊಂಬೆಯ ಹಿನ್ನೆಲೆಯಲ್ಲಿ ಕಾಣಿಸುತ್ತವೆ. ಒಂದೊಂದೇ ಹನಿ ಬಿದ್ದು ಮಳೆ ಶುರು... ಗೊಂಬೆಯ ಮೇಲೆ ಮಳೆ ಬಿದ್ದಂತೆಯಲ್ಲ ಸಣ್ಣಗೆ ಹೊಗೆ ಎದ್ದು ಕರಗಿ ಹೋಗುತ್ತದೆ. ಮಳೆ ಹನಿ ಬಿದ್ದಲ್ಲೆಲ್ಲ ರಸ್ತೆಯ ಡಾಂಬರು ಕರಗುತ್ತದೆ. ಕಾರಿನ ಲೋಹದ ಮೈ ಕರಗುತ್ತದೆ. ಅಂದಮೇಲೆ ಮನುಷ್ಯನ ಕತೆ ಏನಾಗಿರಬೇಡ? ನೋಡ ನೋಡುತ್ತಿದ್ದಂತೆಯೇ ಮನುಷ್ಯರು ಬಿದ್ದು ಒದ್ದಾಡಲು ಶುರುಮಾಡುತ್ತಾರೆ. ಒಂದು ಕಾರಿನ ಒಳಗೆ ಎಳೆಯ ಹಸುಗೂಸೊಂದು ಮಲಗಿದೆ. ಸುತ್ತಲೆಲ್ಲ ನಡೆಯುತ್ತಿರುವ ಕೋಲಾಹಲದ ಪರಿವೂ ಅದಕ್ಕಿಲ್ಲ. ಕಾರನ ನೆತ್ತಿಯ ಮೇಲೆ ಸುರಿಯುತ್ತಿರುವ ಮಳೆಯನ್ನೇ ನೋಡಿ ಕೈಕಾಲು ಬಡಿದುಕೊಂಡು ನಗುತ್ತಿದೆ. ಆ ಕಾರಿನ ಲೋಹದ ಮೈ ನಿಧಾನ ಕರಗುತ್ತಿದೆ. ಮರುಕ್ಷಣದಲ್ಲಿಯೇ ಹಸುಗೂಸಿನ ಆಕ್ರಂದನ ಮುಗಿಲು ಮುಟ್ಟುತ್ತದೆ. ಅದನ್ನು ಕೇಳಲು ಅಲ್ಲಿ ಯಾರೂ ಇಲ್ಲ.

ಹಿಂಬಾಲಿಸಿ ಬರುತ್ತಿರುವ ಭಿರುಮಳೆಯಿಂದ ತಪ್ಪಿಸಿಕೊಂಡು ಓಡುವ ಗಂಡ ಹೆಂಡತಿ ಮತ್ತು ಪುಟಾಣಿ ಮಗುವಿನ ಮೂಲಕವೇ ನಿರ್ದೇಶಕರು ಈ ಭಯಾನಕ ಕಥನವನ್ನು ವಿಸ್ತರಿಸುತ್ತ ಹೋಗುತ್ತಾರೆ. ಮಳೆಯಿಂದ ತಪ್ಪಿಸಿಕೊಂಡು ಹೋಗುವುದ್ಯಾಕೆ? ಯಾಕೆಂದರೆ ಅದು ಸಾಮಾನ್ಯ ಮಳೆಯಲ್ಲ; ಆ್ಯಸಿಡ್ ಮಳೆ.



**ಹೆಸರು:** ಆ್ಯಸಿಡ್ (ಫ್ರೆಂಚ್)
**ನಿರ್ಮಾಣ:** ಲಾ ಫೆಟಿಟ್ ಪ್ರಾಡ್
**ನಿರ್ದೇಶನ:** ಜಸ್ಟ್ ಪಿಲಿಪಾಟ್
**ಛಾಯಾಗ್ರಹಣ:** ಪಿರ್ರೇ ಡೆಜೊನ್
**ಸಂಕಲನ:** ಹೆಲೊಯಿಸ್ ಫೆಲೊಕ್ವೆಟ್
**ತಾರಾಗಣ:** ಮೌಡ್ ವೈಯ್ಲರ್, ಸೊಫಿಯಾನ್ ಕಮ್ಮೆಸ್, ಆ್ಯಂಟೊನಿನ್ ಚೌಸೊಯ್

'ಮನುಷ್ಯ ತಾನು ಮಾಡಿದ ಕರ್ಮದ ಫಲವನ್ನು ಉಂಡೇ ಹೋಗುತ್ತಾನೆ' ಎಂಬುದು ನಂಬಿಕೆ. ಹಾಗೆಯೇ ಇಡೀ ಮನುಕುಲ ಈ ಭೂಮಿಯ ಮೇಲೆ ನಿಸರ್ಗದ ಮೇಲೆ ನಡೆಸಿದ ದೌರ್ಜನ್ಯ, ಪ್ರಕೃತಿಯ ನಿಯಮಾವಳಿಗಳ ನಿರಂತರ ಉಲ್ಲಂಘನೆಯ ಫಲವಾಗಿಯೇ ಇಂಥ ದುರಂತಗಳನ್ನು ನೋಡಬಹುದೇ? ಹಾಗಾದರೆ ಆಗ ತಾನೆ ಹುಟ್ಟಿದ ಮಗು, ಅಪ್ಪ ಅಮ್ಮನೇ ಜಗತ್ತೆಂದು ನಂಬಿರುವ ಎಂಟರ ಪೋರ ಮಾಡಿದ ಪಾಪವಾದರೂ ಏನು? ಹೀಗೆ ಹಲವು ಪ್ರಶ್ನೆಗಳನ್ನು ಈ ಕಿರುಚಿತ್ರ ಹುಟ್ಟುಹಾಕುತ್ತದೆ.

ಜಗತ್ತಿಗೆ ಒದಗುವ ವಿಪರೀತ ವಿಪತ್ತಿನ ಕಾಲ್ಪನಿಕ ಚಿತ್ರಣವನ್ನು ಉಸಿರುಗಟ್ಟಿ ನೋಡುವ ಹಾಗೆ ಕಟ್ಟಿರುವುದು ನಿರ್ದೇಶಕರಿಗೆ ಈ ಮಾಧ್ಯಮದ ಮೇಲೆ ಇರುವ ಹಿಡಿತಕ್ಕೆ ಸಾಕ್ಷಿ. ಗಂಡ ಹೆಂಡತಿ ಇಬ್ಬರಿಗೂ ಆ್ಯಸಿಡ್ ಮಳೆಯಿಂದ ತಮ್ಮ ಮಗುವನ್ನು ರಕ್ಷಿಸಬೇಕು ಎಂಬ ಹಪಹಪಿ. ಅದಕ್ಕಾಗಿ ತಮ್ಮ ಜೀವದ ಹಂಗನ್ನೂ ತೊರೆದು ಓಡುತ್ತಾರೆ. ಆದರೆ ಧರೆಯೆ ಹೊತ್ತಿ ಉರಿಯುವಾಗ ಬದುಕಲೆಲ್ಲಿ ಓಡುವುದು? ಈ ಜೀವರಕ್ಷಣೆಯ ಓಟದಲ್ಲಿ ಮೊದಲು ತಂದೆ ನಂತರ ತಾಯಿಯೂ ಅಸುನೀಗುತ್ತಾಳೆ. ಆದರೆ ಮಗುವನ್ನು ಒಂದು ಸುರಕ್ಷಿತ ಗುಹೆಯಲ್ಲಿ ಬಿಡುತ್ತಾರೆ. ಆ ಕಗ್ಗತ್ತಲ ಗುಹೆಯಲ್ಲಿ ಒಬ್ಬಂಟಿಯಾಗಿ ಸಾಗುವ ಮಗು ಇನ್ನೊಂದು ತುದಿಯಲ್ಲಿ ಹೊರಬೀಳುತ್ತದೆ. ಅಲ್ಲಿಂದ ಹೊರಬೀಳುವ ಹೊತ್ತಿಗೆ ಆ್ಯಸಿಡ್ ಮಳೆ ನಿಂತಿದೆ.

ಹೊರಬಂದು ಬಯಲಲ್ಲಿ ನಿಂತು ಹುಡುಗ ಕೂಗುತ್ತಿದ್ದಾರೆ... 'ಯಾರಾದರೂ ಇದ್ದೀರಾ?' ಉತ್ತರಿಸಲು ಅಲ್ಲಿ ಯಾರೂ ಇಲ್ಲ. ಅಲ್ಲಲ್ಲಿ ನೆಲದಿಂದ ಎದ್ದ ಹೊಗೆಯ ದಾರಿಯಷ್ಟೇ ಕಣ್ಣೆದುರಿಗಿದೆ. ಜಗತ್ತೇ ಸ್ಮಶಾನವಾಗಿದೆ. ನಮ್ಮ ಮುಂದಿನ ಪೀಳಿಗೆಗೆ ನಾವು ಉಳಿಸಿಹೋಗುವುದು ಸ್ಮಶಾನವನ್ನೇ ಎಂಬ ಪ್ರಶ್ನೆಯನ್ನು ಮನಸಲ್ಲಿ ಎಬ್ಬಿಸಿ ಕಿರುಚಿತ್ರ ಕೊನೆಗೊಳ್ಳುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ **bit.ly/2OloBPg** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.